ನಾಳೆ ಜಿಲ್ಲಾ ಮಟ್ಟದ ಕಬಡ್ಡಿ ಕ್ರೀಡಾಕೂಟ

ಉದಯಕಾಲ ನ್ಯೂಸ್

ರಾಮದುರ್ಗ: ಜಿಲ್ಲಾ ಮಟ್ಟದ ಪದವಿಪೂರ್ವ ಮಹಾವಿದ್ಯಾಲಯಗಳ ಕಬಡ್ಡಿ ಕ್ರೀಡಾಕೂಟ ಸೆ-24ರಂದು ಮುಂಜಾನೆ 9:00 ಘಂಟೆಗೆ ರಾಮದುರ್ಗ ನಗರದ ಸುಶೀಲಾತಾಯಿ ವೈ. ಕುಲಗೋಡ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದ ಆವರಣದಲ್ಲಿ ನಡೆಯಲಿವೆ ಎಂದು ಪ್ರಾಚಾರ್ಯ ಡಿ.ಎಂ. ಮೊಗೇರ ತಿಳಿಸಿದ್ದಾರೆ. ವಿದ್ಯಾ ಪ್ರಸಾರಕ ಸಮಿತಿಯ ಅಧ್ಯಕ್ಷ ಎಸ್. ಎಸ್. ಸುಲ್ತಾನಪೂರ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕ್ರೀಡಾಕೂಟವನ್ನು ಬೆಳಗಾವಿಯ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಎಂ. ಕಾಂಬಳೆ ಉದ್ಘಾಟಿಸುವರು. ಅತಿಥಿಗಳಾಗಿ ವಿದ್ಯಾ ಪ್ರಸಾರಕ ಸಮಿತಿಯ ಉಪಾಧ್ಯಕ್ಷ ಪ್ರದೀಪ ಪಟ್ಟಣ, ನ್ಯಾಯವಾದಿ ಪಿ.ಎಂ. ಜಗತಾಪ, ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಎಸ್.ಜಿ ಮಾಳವಾಡ, ಬೆಳಗಾವಿಯ ಪದವಿಪೂರ್ವ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ನಿರ್ದೇಶಕ ಪ್ರಭು ಶಿವನಾಯ್ಕರ, ಇಲಾಖೆಯ ಉಪ ಸಂಯೋಜಕ ಶ್ರೀಧರ ಹಿರೇಮಠ, ತಾಲೂಕಾ ದೈ.ಶಿ ಸಂಯೋಜಕ ಶ್ರೀಶೈಲ ಜಲಗೇರಿ ಸೇರಿದಂತೆ ಮುಂತಾದವರು ಪಾಲ್ಗೊಳ್ಳಿದ್ದಾರೆ. ಜಿಲ್ಲೆಯ ಎಲ್ಲಾ ಪ.ಪೂ ಮಹಾವಿದ್ಯಾಲಯಗಳ ಕಬಡ್ಡಿ ತಂಡಗಳು ಸಮುಯಕ್ಕೆ ಸರಿಯಾಗಿ ಹಾಜರಾಗಬೇಕು ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಚಾಲಕರ ಬೇಜವಾಬ್ದಾರಿ: ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್ ನಿಲುಗಡೆಗೆ ದೂರು

ಉದಯಕಾಲ ನ್ಯೂಸ್

ಬೆಳಗಾವಿ: ರಾತ್ರಿ ವೇಳೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್‌ಗಳನ್ನು ನಿಯಮಬಹಿರವಾಗಿ ನಿಲ್ಲಿಸಿ ಪ್ರಯಾಣಿಕರಿಗೆ ತೊಂದರೆ ನೀಡುತ್ತಿರುವ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿಯ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯದ ವಿರುದ್ಧ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಬೆಳಗಾವಿ ಜಿಲ್ಲಾ ಸಮಿತಿಯು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮಂಗಳವಾರ ಅಧಿಕೃತ ದೂರು ಸಲ್ಲಿಸಿದೆ.

ನಿಯಮ ಉಲ್ಲಂಘನೆ ಮತ್ತು ಅಪಾಯ: ಎಂ.ಕೆ. ಹುಬ್ಬಳ್ಳಿ ಹಾಗೂ ಹಿರೇಬಾಗೇವಾಡಿ ಗ್ರಾಮಗಳು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿದ್ದು, ರಾಷ್ಟ್ರೀಯ ಹೆದ್ದಾರಿ ನಿಯಮಗಳ ಪ್ರಕಾರ ಹೆದ್ದಾರಿ ಮೇಲೆ ವಾಹನಗಳನ್ನು ನಿಲ್ಲಿಸುವುದು ಕಾನೂನುಬಾಹಿರವಾಗಿದೆ. ಆದರೆ ರಾತ್ರಿ 9:00 ಗಂಟೆಯಿಂದ ಮಧ್ಯರಾತ್ರಿ 12:00 ಗಂಟೆಯವರೆಗೆ ಸಂಚರಿಸುವ ಬಸ್‌ಗಳ ಚಾಲಕರು ಮತ್ತು ನಿರ್ವಾಹಕರು ಸರ್ವೀಸ್ ರಸ್ತೆ ಬಳಸದೆ ಹೆದ್ದಾರಿ ಮೇಲೆಯೇ ಬಸ್ ನಿಲ್ಲಿಸಿ ನಿಯಮಗಳನ್ನು ಉಲ್ಲಂಘಿಸುತ್ತಿದ್ದಾರೆ.

ಪ್ರಯಾಣಿಕರಿಗೆ ತೊಂದರೆ: ಸೆಪ್ಟೆಂಬರ್ 21ರಂದು ರಾತ್ರಿ 9:30ರ ಸುಮಾರಿಗೆ ಸಂಭವಿಸಿದ ಘಟನೆಯೊಂದರಲ್ಲಿ, ಪ್ರಯಾಣಿಕರು ಸುಮಾರು ಎರಡು ಗಂಟೆಗಳ ಕಾಲ ಕಾದು ಬಸ್ ಹತ್ತುವಂತಾಗಿ ಪ್ರತಿದಿನ ನಿರಂತರ ತೊಂದರೆ ಅನುಭವಿಸುವಂತಾಗಿದೆ.

ಸಮಿತಿಯ ಆಗ್ರಹ: ಬಸ್ ಸಂಖ್ಯೆ ಕೆ.ಎ.-22. ಎಫ್-2332 ಹಾಗೂ ಕೆ.ಎ.-22.ಎಫ್-2324ರ ಸಿಬ್ಬಂದಿಯ ಈ ಬೇಜವಾಬ್ದಾರಿ ವರ್ತನೆಯಿಂದ ಪ್ರಯಾಣಿಕರಿಗೆ ಪ್ರಾಣಾಪಾಯ ಸಂಭವಿಸಿದರೆ ಸಂಸ್ಥೆಯೇ ನೇರ ಹೊಣೆಯಾಗಲಿದೆ. ಹೀಗಾಗಿ, ರಾತ್ರಿ ವೇಳೆಯಲ್ಲಿ ಸಂಚರಿಸುವ ಚಾಲಕರು ಮತ್ತು ನಿರ್ವಾಹಕರಿಗೆ ಸೂಕ್ತ ಎಚ್ಚರಿಕೆ ಹಾಗೂ ಮಾರ್ಗದರ್ಶನ ನೀಡಿ, ಬೇಜವಾಬ್ದಾರಿ ತೋರಿದವರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಸಂಘಟನಾ ಸಂಚಾಲಕರಾದ ರಾಜಶೇಖರ ಶಂಕರ ಹಿಂಡಲಗಿ ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ರವಿ ಮಾದಾರ ಮುಂತಾದವರು ಉಪಸ್ಥಿತರಿದ್ದರು.

ರೈತರ ಸಂಕಷ್ಟಕ್ಕೆ ಸ್ಪಂದಿಸದ ಸರ್ಕಾರ:ಹಾಳಾಗುತ್ತಿರುವ ಬೆಳೆಗಳು, ಬೆಳೆ ಸಾಲ ಮನ್ನಾ ಹಾಗೂ ಪ್ರತಿ ಎಕರೆಗೆ 50 ಸಾವಿರ ರೂ. ಪರಿಹಾರಕ್ಕೆ ಆಗ್ರಹ

ಮಳೆಯಾಶ್ರಿತ ತಾಲೂಕನ್ನು ಕೂಡಲೇ ಬರ ಪೀಡಿತ ಪಟ್ಟಿಗೆ ಸೇರಿಸಲು ಆಗ್ರಹ

ಉದಯಕಾಲ ನ್ಯೂಸ್

ಖಾನಾಪುರ: ಈ ವರ್ಷ ಮಳೆಯ ಕೊರತೆ ಹಾಗೂ ಬಿಸಿಲಿನ ಬೇಗೆಯಿಂದಾಗಿ ಖಾನಾಪುರ ತಾಲೂಕಿನಲ್ಲಿ ಭತ್ತ ಸೇರಿದಂತೆ ಪ್ರಮುಖ ಬೆಳೆಗಳು ಸಂಪೂರ್ಣವಾಗಿ ಒಣಗಿ ಹೋಗುತ್ತಿದ್ದು, ರೈತರು ತೀವ್ರ ಆರ್ಥಿಕ ಸಂಕಟಕ್ಕೆ ಸಿಲುಕಿದ್ದಾರೆ. ಆದರೂ ಸರ್ಕಾರ ಖಾನಾಪುರ ತಾಲೂಕನ್ನು ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಸೇರಿಸದಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ, ಖಾನಾಪುರ ತಾಲೂಕನ್ನು ತಕ್ಷಣವೇ ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಆಗ್ರಹಿಸಿ 'ಖಾನಾಪುರ ತಾಲೂಕು ವಿಕಾಸ ಒಕ್ಕೂಟ 'ದ ವತಿಯಿಂದ ಸೋಮವಾರ ತಹಶೀಲ್ದಾರ್ ದುಂಡಪ್ಪ ಕೊಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷರಾದ ಭರಮಾಣಿ ಪಾಟೀಲ್, ಹನುಮಂತ ಪಾಟೀಲ್, ಮಾರುತಿ ಪಾಟೀಲ್, ಆನಂದ್ ಚೋಪಡೆ, ವಿಜಯ್ ಚೌಗುಲೆ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

ತಾಲೂಕಿನಲ್ಲಿ ಮಳೆಯಿಲ್ಲದೆ ಕೃಷಿ ಚಟುವಟಿಕೆಗಳು ಸಂಪೂರ್ಣ ಅಸ್ತವ್ಯಸ್ತಗೊಂಡಿವೆ. ಕಳೆದ ಹದಿನೈದು ದಿನಗಳಿಂದ ಬಿಸಿಲಿನ ತೀವ್ರತೆ ಹೆಚ್ಚಿರುವ ಕಾರಣ ರೈತರ ಬೆಳೆಗಳು ಕರಗಿ ಹೋಗುತ್ತಿವೆ. ಖಾನಾಪುರ ತಾಲೂಕಿನ ಮುಖ್ಯ ಬೆಳೆಯಾದ ಭತ್ತದ ಕೃಷಿ ಸಂಪೂರ್ಣ ಸಂಕಷ್ಟದಲ್ಲಿದೆ. ಇದರೊಂದಿಗೆ ನದಿ, ನಾಲೆ ಹಾಗೂ ಕೊಳವೆಬಾವಿಗಳ ಅಂತರ್ಜಲ ಕುಸಿದ ಪರಿಣಾಮ ಕಬ್ಬು ಸೇರಿದಂತೆ ಇತರೆ ಬೆಳೆಗಳೂ ಒಣಗುವ ಹಂತ ತಲುಪಿವೆ. ಇದರಿಂದ ರೈತರು ಹಾಗೂ ಕೃಷಿ ಕಾರ್ಮಿಕರು ದಿಕ್ಕುತ್ಪಚದ ಸ್ಥಿತಿಯಲ್ಲಿದ್ದಾರೆ.

ಖಾನಾಪುರ ತಾಲೂಕನ್ನು ತಕ್ಷಣವೇ ಬರಪೀಡಿತ ಪ್ರದೇಶವೆಂದು ಘೋಷಿಸಿ, ರೈತರಿಗೆ ಆರ್ಥಿಕ ನೆರವು ನೀಡಬೇಕು. ರೈತರ ಎಲ್ಲಾ ಬೆಳೆ ಸಾಲಗಳನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು.

ಎಕರೆಗೆ 50 ಸಾವಿರ ರೂ. ಪರಿಹಾರ: ಬೆಳೆ ನಷ್ಟ ಅನುಭವಿಸಿದ ಪ್ರತಿ ಎಕರೆಗೆ 50,000 ರೂ.ಗಳ ಆರ್ಥಿಕ ನೆರವು ಮಂಜೂರು ಮಾಡಬೇಕು.

ಕೃಷಿ ನಂಬಿ ಬದುಕುತ್ತಿರುವ ಕೂಲಿ ಕಾರ್ಮಿಕರಿಗೆ 25,000 ರೂ.ಗಳ ಪರಿಹಾರ ಧನ ನೀಡಬೇಕು.

ಸರ್ಕಾರ ತಕ್ಷಣವೇ ಮಳೆ ಮತ್ತು ಬೆಳೆ ಪರಿಸ್ಥಿತಿಯ ವೈಜ್ಞಾನಿಕ ಸಮೀಕ್ಷೆ ನಡೆಸಿ ಖಾನಾಪುರವನ್ನು ಬರಪೀಡಿತ ಪಟ್ಟಿಗೆ ಸೇರಿಸಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ತಾಲೂಕಿನ ನಾಗರಿಕರನ್ನು ಒಗ್ಗೂಡಿಸಿ ತಹಶೀಲ್ದಾರ್ ಕಚೇರಿ ಎದುರು ಮುಷ್ಕರ ಹಾಗೂ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆ ಎಚ್ಚರಿಕೆ ನೀಡಿದೆ.

ಭೂಸ್ವಾಧೀನಾಧಿಕಾರಿ ಕಚೇರಿಗೆ ಬೀಗ: ಎ. ರಘು ವಿರುದ್ಧ ಎಂಜಿನಿಯರ್‌ಗಳ ಆಕ್ರೋಶ

ತುರ್ತು ಕೆಲಸಗಳಲ್ಲಿ ವಿಳಂಬ, ಮೇಲಾಧಿಕಾರಿಗಳೊಂದಿಗೆ ಅಗೌರವದ ವರ್ತನೆ ಆರೋಪ; ವರ್ಗಾವಣೆ ಹಾಗೂ ಕ್ಷಮೆಯಾಚನೆಗೆ ಆಗ್ರಹ

ಉದಯಕಾಲ ನ್ಯೂಸ್

ಅಥಣಿ: ದೈನಂದಿನ ಆಡಳಿತಾತ್ಮಕ ಕೆಲಸಗಳು ಹಾಗೂ ನ್ಯಾಯಾಲಯಕ್ಕೆ ಸಂಬಂಧಿಸಿದ ತುರ್ತು ಪ್ರಕರಣಗಳ ನಿರ್ವಹಣೆಯಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂದು ಆರೋಪಿಸಿ, ವಿಶೇಷ ಭೂಸ್ವಾಧೀನಾಧಿಕಾರಿ ಎ. ರಘು ಅವರ ವಿರುದ್ಧ ಕರ್ನಾಟಕ ನೀರಾವರಿ ನಿಗಮದ ಅಥಣಿ ಘಟಕ ಸೇರಿದಂತೆ ವಿವಿಧ ಇಲಾಖೆಗಳ ಎಂಜಿನಿಯರ್‌ಗಳು ಪ್ರತಿಭಟನೆ ನಡೆಸಿದರು.

ಅಥಣಿ ಪಟ್ಟಣದ ವಿಶೇಷ ಭೂಸ್ವಾಧೀನಾಧಿಕಾರಿ ಕಛೇರಿಗೆ ಮಂಗಳವಾರ ಮುತ್ತಿಗೆ ಹಾಕಿ ಅಧಿಕಾರಿ ವಿವಿಧ ಇಲಾಖೆ ಇಂಜಿನೀಯರುಗಳು ಅಧಿಕಾರಿ ಎ. ರಘು ಅವರ ನಡುವಳಿಗೆ ವಿರೋಧಿಸಿ ಪ್ರತಿಭಟನೆ ನಡೆಸಿದರು, ಅಧಿಕಾರಿಯ ಕಚೇರಿ ಮುಂದೆ ಆಕ್ರೋಶ ವ್ಯಕ್ತಪಡಿಸಿ ಘೋಷಣೆಗಳನ್ನು ಕೂಗಿದರು. ನಂತರ ತಹಶೀಲ್ದಾರ ಅವರ ಮೂಲಕ ಮೇಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಕ್ರಮಕ್ಕೆ ಆಗ್ರಹಿಸಿದರು. ಕಛೇರಿಗೆ ಬಂದ ಭೂ ಸ್ವಾಧಿನಾಧಿಕಾರಿ ಎ. ರಘು ಅವರು ಕ್ಷಮೇಯಾಚನೆ ನಂತರ ಪ್ರತಿಭಟನೆಯನ್ನು ಹಿಂದಕ್ಕೆ ಪಡೆಯಲಾಗಯಿತು.

ಈ ವೇಳ ನೀರಾವರಿ ನಿಗಮದ ಕಾರ್ಯನಿರ್ವಾಹಕ ಅಭಿಯಂತರ ಪ್ರವೀಣ ಹುಣಸಿಕಟ್ಟಿ ಮಾತನಾಡಿ ಕರ್ನಾಟಕ ನೀರಾವರಿ ನಿಗಮದ ಯೋಜನೆಗಳಿಗೆ ಸಂಬಂಧಿಸಿದ ರೈತರ ಜಮೀನುಗಳ ಭೂಸ್ವಾಧೀನ ಹಾಗೂ ಪರಿಹಾರ ವಿತರಣೆಯಂತಹ ಮಹತ್ವದ ವಿಷಯಗಳಲ್ಲಿ ಅಗತ್ಯ ಸಮನ್ವಯ ದೊರೆಯುತ್ತಿಲ್ಲ, ತುರ್ತು ವಿಷಯಗಳ ಕುರಿತು ದೂರವಾಣಿ ಮೂಲಕ ಸಂಪರ್ಕಿಸಿದಾಗ ಕರೆ ಸ್ವೀಕರಿಸದಿರುವುದು, ಕಾಮಗಾರಿಗಳ ಭೂಸ್ವಾಧೀನದ ಪ್ರಗತಿ ಕುರಿತು ಸಮರ್ಪಕ ಮಾಹಿತಿ ನೀಡದಿರುವುದು ಹಾಗೂ ಮೇಲಾಧಿಕಾರಿಗಳೊಂದಿಗೆ ಸೌಜನ್ಯಯುತವಾಗಿ ವರ್ತಿಸುತ್ತಿಲ್ಲ ಅಲ್ಲದೆ ನ್ಯಾಯಾಲಯಕ್ಕೆ ಸಂಬಂಧಿಸಿದ ಅರೆಸ್ಟ್ ವಾರಂಟ್, ಅಟ್ಯಾಚ್‌ಮೆಂಟ್ ವಾರಂಟ್ ಸೇರಿದಂತೆ ತುರ್ತು ಸ್ವರೂಪದ ಪ್ರಕರಣಗಳಲ್ಲಿಯೂ ವಿಳಂಬವಾಗುತ್ತಿದೆ. ಸರ್ಕಾರದ ಪ್ರಜಾಸೇವೆ, ಜನಸ್ಪಂದನಾ ಕಾರ್ಯಕ್ರಮಗಳಡಿ ಸಾರ್ವಜನಿಕರ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಬೇಕಾದ ಸಂದರ್ಭದಲ್ಲಿ ಅಧಿಕಾರಿಯ ಕಾರ್ಯವೈಖರಿಯಿಂದ ಸಮಸ್ಯೆಗಳು ಉಂಟಾಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ಸ್ಥಳಕ್ಕೆ ತಹಶೀಲ್ದಾರ ಸಿದ್ದರಾಯ ಭೋಸಗಿ ಅವರು ಭೇಟಿ ನೀಡಿ ಅಧಿಕಾರಿಗಳ ಸಮಸ್ಯೆಯನ್ನು ಕೇಳಿ ನಂತರ ಮುಂದೆ ಯಾವುದೇ ರೀತಿಯಾಗಿ ಸಮಸ್ಯೆ ಆಗದಂತೆ ನೋಡಿಕೊಳ್ಳುವ ಭರವಸೆಯನ್ನು ಅಧಿಕಾರಿಗಳಿಗೆ ನೀಡಿದರು. ಈ ನಿಮ್ಮ ಮನವಿ ಪತ್ರವನ್ನು ಮಾನ್ಯ ಜಿಲ್ಲಾಧಿಕಾರಿ ಅವರ ಗಮನಕ್ಕೆ ತರುತ್ತನೆ ಎಂದು ಹೇಳಿದರು ಈ ಪ್ರತಿಭಟನೆಯನ್ನು ಇಲೇ ಕೈ ಬಿಡಬೇಕು ಎಂದು ಪ್ರತಿಭಟನೆಯಲ್ಲಿ ನಿರತರಾದ ಎಲ್ಲಾ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ನಾನು ಯಾವುದೇ ತಪ್ಪು ಮಾಡಿಲ್ಲ: ಆರೋಪಗಳಿಗೆ ಪ್ರತಿಕ್ರಿಯಿಸಿದ ವಿಶೇಷ ಭೂಸ್ವಾಧೀನಾಧಿಕಾರಿ ಎ. ರಘು, ನಾನು ಯಾವುದೇ ತಪ್ಪು ಮಾಡಿಲ್ಲ. ಎಸ್‌ಐಆರ್ ಕೆಲಸದ ಹಿನ್ನೆಲೆಯಲ್ಲಿ ಅನಂತಪುರ ಹೋಬಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಯಾರಿಗೂ ನಾನು ಅಗೌರವ ತೋರಿಲ್ಲ. ಒಂದು ವೇಳೆ ಹಾಗೆ ಮಾಡಿದ್ದರೆ ಕ್ಷಮೆಯಾಚಿಸುತ್ತೇನೆ. ಯಾವುದೇ ರೈತರ ಕೆಲಸಗಳನ್ನು ನಿಲ್ಲಿಸಿಲ್ಲ. ಮುಂದೆ ಎಲ್ಲ ಕಾರ್ಯಗಳನ್ನು ಯಾವುದೇ ಸಮಸ್ಯೆಯಾಗದಂತೆ ನಡೆಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದರು.

ಈ ವೇಳೆ ವಿವಿಧ ಇಲಾಖೆಗಳ ಅಭಿಯಂತರರಾದ ಮಲ್ಲಿಕಾರ್ಜುನ ಮಗದುಮ್, ಎಸ್. ಎ ಲಾಂಡಗೆ, ಪ್ರವೀಣ ಪಾಟೀಲ, ಭರತೇಶ ಮಹಿಷವಾಡಗಿ, ಪ್ರದೀಪ ಪಾಟೀಲ, ಎನ್. ಸಿ ಪವಾರ, ಬಸವರಾಜ ಗಲಗಲಿ, ಪ್ರಶಾಂತ ಪೊದ್ದಾರ ಸೇರಿದಂತೆ ಹಲವು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಪ್ರೇಕ್ಷಕರ ಮನರಂಜಿಸಿದ ಶ್ರೀ ಕೃಷ್ಣ ಪಾರಿಜಾತ

ಉದಯಕಾಲ ನ್ಯೂಸ್

ಚಿಕ್ಕೋಡಿ: ಹಬ್ಬ ಹರಿದಿನಗಳಲ್ಲಿ ನಮ್ಮ ನಾಡಿನ ಜಾನಪದ ಸಾಂಸ್ಕೃತಿ ಬಯಲಾಟ ಕಾರ್ಯ್ರಮಗಳನ್ನು ಆಯೋಜಿಸಿ ಹಳ್ಳಿಯ ಪಾರಂಪರಿಕ ಕಲೆಗಳನ್ನು ಉಳಿಸಲು ಪ್ರತಿಯೊಬ್ಬರು ಕಲೇ ಕಲಾವಿದರನ್ನು ಸಭಿಮಾನದಿಂದ ಬೆಳೆಸಬೇಕೆಂದು ಕಮತೇನಟ್ಟಿಯ ಹನುಮಂತ ಶಾಸ್ತ್ರೀಗಳು ಅಭಿವ್ಯಕ್ತ ಪಡಿಸಿದರು. ಅವರು ಚಿಕ್ಕೋಡಿ ಸಮೀಪದ ಶ್ರೀ ಮಾರುತೇಶ್ವರ ಸೇವಾ ಕಮೀಟಿ ಹಳದಟ್ಟಿ ಹಾಗೂ ಸಮೃದ್ಧ ಕಲಾಸಂಗಮ ಸೇವಾ ಸಂಘ ಬೋರಗಲ್ಲ ಇವರ ಸಂಯುಕ್ತ ಆಶ್ರಯದಲ್ಲಿ ಗಣೇಶೋತ್ಸವದ ಅಂಗವಾಗಿ ಸ್ಥಳೀಯ ಹನುಮಾನ ದೇವಸ್ಥಾನ ಆವರಣದಲ್ಲಿ ಕಳೆದ ಸೋಮವಾರ 21 ರಂದು ಶ್ರೀ ಕೃಷ್ಣ ಪಾರೀಜಾತ ಹಾಗೂ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಹಾಗೇ ಜಾನಪದ ಸಾಂಸ್ಕೃತಿಕ ಕಲೆ ನಶಿಸಿ ಹೋಗದಂತೆ ಅವುಗಳನ್ನು ಜೋಪಾನವಾಗಿ ಕಾಪಾಡಿ ಬೆಳೆಸಬೇಕೆಂದರು.

ಅತಿಥಿಗಳಾಗಿ ಆಗಮಿಸಿದ ರಾಷ್ಟ್ರ ಪ್ರಶಸ್ತಿ ಪುರಸ್ಕೃತ, ಸಾಂಸ್ಕೃತಿಕ ಸಂಗಟಕರಾದ ಭರತ ಕಲಾಚಂದ್ರ ಇವರು ಮಾತನಾಡಿ ಬೆಳಗಾವಿ ಜಿಲ್ಲೆ ಸಣ್ಣಾಟ ಕಲೆಗೆ ಕೊಡುಗೆ ನೀಡಿದ ಜಿಲ್ಲೆಯಾಗಿದ್ದು, ಪಾರಿಜಾತ, ರಾಧಾನಾಟ, ಸಂಗ್ಯಾ-ಬಾಳ್ಯಾ ಮುಂತಾದ ಸಣ್ಣಾಟ ಕಲೆ ಮುಂದಿನ ತಲೆಮಾರಿಗೆ ಉಳಿಸಲು ಬಯಲಾಟ ಕಲೆಗೆ ಎಲ್ಲರು ಉತ್ತೇಜನ ನೀಡಬೇಕೆಂದರು.

ಸುರೇಶ ಸ್ವಾಮಿಗಳು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದರು. ವೇದಿಕೆಯ ಮೇಲೆ ಅಪ್ಪಣ್ಣಾ ಖೋತ, ಆಕಾಶವಾಣಿ ಕಲಾವಿದರಾದ ರುದ್ರಪ್ಪಾ ಸುಂಕದ, ಸುಭಾಷ ಪೂಜೇರಿ, ಪೂಜಾ ಹಾದಿಮನಿ ಪ್ರಭಾಕರ ಹಾದಿಮನಿ ಉಪಸ್ಥಿತರಿದ್ದರು. ಸುಪ್ರೀಯಾ, ಸುಜಾತಾ ಜಾನಪದ ಸಂಗೀತ ಗಾಯನ ಪ್ರಸ್ತುತಪಡಿಸಿದರು. ಹಿರಿಯ ಪಾರಿಜಾತ ಕಲಾವಿದ ಪುಂಡಲೀಕ ನಾಯಿಕ ಹಾಗೂ ತಂಡದವರು ಶ್ರೀ ಕೃಷ್ಣ ಪಾರಿಜಾತ ಕಲಾಪ್ರದರ್ಶನ ನೀಡಿದರು. ಕಸ್ತೂರಿ ಮಣ್ಣಿಕೇರಿ, ದೊಡ್ಡವ್ವಾ ದರ್ಶನಕೋಳ್ಳ, ನಿಲೋಫರ ಉಗಾರ ಇವರನ್ನು ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ರಂಗೋಲಿ ಸ್ಪರ್ದೇಯಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಬಹುಮಾನ ನೀಡಲಾಯಿತು. ಶ್ರೀ ಪ್ರಕಾಶ ಪೂರ್ವೆ ಸ್ವಾಗತಿಸಿದರು. ಚಂದ್ರಪ್ಪಾ ಹಿರಿವೆ ನಿರೂಪಿಸಿ, ವಂದಿಸಿದರು.

ಗಣೇಶ ವಿಸರ್ಜನೆ: ಬೆಳಗಾವಿಯಲ್ಲಿ ಕಟ್ಟುನಿಟ್ಟಿನ ಭದ್ರತೆ, 12 ವಿಶೇಷ ದಂಡಾಧಿಕಾರಿಗಳ ನೇಮಕ

ಉದಯಕಾಲ ನ್ಯೂಸ್

ಬೆಳಗಾವಿ: ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಗಣೇಶ ವಿಸರ್ಜನೆ ಮೆರವಣಿಗೆಯ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಸಂಪೂರ್ಣವಾಗಿ ಕಾಪಾಡುವ ಉದ್ದೇಶದಿಂದ ಜಿಲ್ಲಾ ಆಡಳಿತವು ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಗೆ ಒಟ್ಟು 12 ವಿಶೇಷ ಕಾರ್ಯಾಕಾರಿ ದಂಡಾಧಿಕಾರಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ. ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸೋಮವಾರ ಈ ಕುರಿತು ಅಧಿಕೃತ ಆದೇಶ ನೀಡಿದ್ದಾರೆ.

ಬರುವ ಸೆಪ್ಟೆಂಬರ್ 25ರಂದು ನಡೆಯಲಿರುವ ಗಣೇಶ ವಿಸರ್ಜನೆಯ ಹಿನ್ನೆಲೆಯಲ್ಲಿ ಈ ಮಹತ್ವದ ನೇಮಕ ಮಾಡಲಾಗಿದೆ. ವಿಸರ್ಜನೆ ಮೆರವಣಿಗೆ ಆರಂಭವಾದಾಗಿನಿಂದ ಹಿಡಿದು, ಅದು ಪೂರ್ಣಗೊಂಡು ಸಾರ್ವಜನಿಕರ ದಟ್ಟಣೆ ಸಂಪೂರ್ಣವಾಗಿ ಇಳಿಕೆಯಾಗುವವರೆಗೆ ಈ ಅಧಿಕಾರಿಗಳು ತಮ್ಮ ನಿರ್ದಿಷ್ಟ ಕಾರ್ಯಕ್ಷೇತ್ರದಲ್ಲಿಯೇ ಸಕ್ರಿಯವಾಗಿ ಕರ್ತವ್ಯ ನಿರ್ವಹಿಸಲಿದ್ದಾರೆ. ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ನಾಗರಿಕರು ಭಾಗವಹಿಸುವುದರಿಂದ ಉಂಟಾಗುವ ಜನದಟ್ಟಣೆಯನ್ನು ನಿಯಂತ್ರಿಸಲು ಮತ್ತು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಇವರಿಗೆ ವಿಶೇಷ ಅಧಿಕಾರಗಳನ್ನು ನೀಡಲಾಗಿದೆ. ಪೊಲೀಸ್ ಆಡಳಿತದೊಂದಿಗೆ ನಿರಂತರವಾಗಿ ಸಮನ್ವಯ ಸಾಧಿಸಿ, ತಮ್ಮ ಕಾರ್ಯಕ್ಷೇತ್ರದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಈ ಅಧಿಕಾರಿಗಳ ಮೇಲಿದೆ. ಎಲ್ಲಾ ವಿಶೇಷ ಕಾರ್ಯಕಾರಿ ದಂಡಾಧಿಕಾರಿಗಳು ಸೆಪ್ಟೆಂಬರ್ 23ರೊಳಗೆ ತಮ್ಮ ವರದಿ ಹಾಗೂ ಅಗತ್ಯ ಸಿದ್ಧತೆಗಳ ಮಾಹಿತಿಯನ್ನು ಸಂಬಂಧಿತ ಪೊಲೀಸ್ ಅಧಿಕಾರಿಗಳಿಗೆ ಸಲ್ಲಿಸಬೇಕು. ವಿಸರ್ಜನೆಯ ದಿನದಂದು ಬೆಳಿಗ್ಗೆ 10 ಗಂಟೆಗೆ ಬೆಳಗಾವಿ ನಗರದ ಸಹಾಯಕ ಪೊಲೀಸ್ ಆಯುಕ್ತರ (ಕಾನೂನು ಮತ್ತು ಸುವ್ಯವಸ್ಥೆ) ಕಚೇರಿಯಲ್ಲಿ ಕಡ್ಡಾಯವಾಗಿ ಹಾಜರಿರುವಂತೆ ಸೂಚನೆ ನೀಡಲಾಗಿದೆ.

ಪೊಲೀಸ್ ಠಾಣೆವಾರು ಜವಾಬ್ದಾರಿಯುತ ಅಧಿಕಾರಿಗಳ ವಿವರ

★ **ತಿಲಕವಾಡಿ:** ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಎಫ್. ಯು. ಪುಜೇರ.
ಮಾಳಮಾರುತಿ: ಜಿಲ್ಲಾ ತೋಟ ಗಾರಿಕಾ ಇಲಾಖೆಯ ಉಪನಿರ್ದೇಶಕ ಮಹಾಂತೇಶ ಮುರಗೋಡ.
ಎಪಿಎಂಸಿ: ಪಶುಸಂಗೋಪನಾ ಹಾಗೂ ಪಶುವೈದ್ಯಕೀಯ ಇಲಾಖೆಯ ಉಪನಿರ್ದೇಶಕ ಡಾ. ರವಿ ಸಾಲಿಗೌಡರ.
ಮಾರ್ಕೆಟ್: ಕೆಆರ್‌ಇಡಿಬಿಯ ಕಾರ್ಯನಿರ್ವಾಹಕ ಅಭಿಯಂತರ ಉಮೇಶ್ ಇಟಗಿ.
★**ಉದ್ಯಮಬಾಗ:** ಹಿರಿಯ ಭೂವಿಜ್ಞಾನಿ ಮಲ್ಲಿಕಾರ್ಜುನ ಬಳೀಗಾರ.
★**ಶಹಾಪುರ:** ಎಆರ್‌ಸಿಎಸ್ ಅಧಿಕಾರಿ ಝುಬಿಉಲ್ಲಾ ಕೆ.
★**ಬೆಳಗಾವಿ ಗ್ರಾಮೀಣ:** ಉದ್ಯಮಬಾಗದ ಜಂಟಿ ನಿರ್ದೇಶಕ ಸತ್ಯನಾರಾಯಣ ಭಟ್.
★**ಕಾಕತಿ:** ಮಹಿಳಾ ಮತ್ತುಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚೇತನ ಕುಮಾರ.
★**ಖಡೇಬಾಜಾರ:** ಸಮಾಜ ಕಲ್ಯಾಣ ಇಲಾಖೆಯ ಸಹಾಯಕ್ ನಿರ್ದೇಶಕ ಬಿ. ಆರ್. ಚನ್ನಯಣ್ಣವರ.
★**ಕ್ಯಾಂಪ್:** ಜಿಲ್ಲಾ ಬಾಲ ಸಂರಕ್ಷಣಾ ಅಧಿಕಾರಿ ರಾಮಮೂರ್ತಿ ಕೆ.ವ್ಹಿ
★ ಹಿರೇಬಾಗೇವಾಡಿ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಬಸವರಾಜ ಕುರುಹುಲಿ .
★**ಮಾರಿಹಾಳ:** ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ರಾ ಮಣಗೌಡ ಬಿ. ಕನ್ನೋಳಿ.

ಬೀದಿ ನಾಯಿಯ ದಾಳಿ: ವೃದ್ಧೆಗೆ ಗಂಭೀರ ಗಾಯ

ಮನೆ ಎದುರು ಕುಳಿತಿದ್ದ 72 ವರ್ಷದ ಮಹಿಳೆ ಮೇಲೆ ದಾಳಿ; ಆಸ್ಪತ್ರೆಗೆ ದಾಖಲು

ಉದಯಕಾಲ ನ್ಯೂಸ್

ಬೆಳಗಾವಿ: ಮನೆ ಎದುರು ಕುಳಿತಿದ್ದ ವೃದ್ಧೆಯ ಮೇಲೆ ಬೀದಿ ನಾಯಿಯೊಂದು ಏಕಾಏಕಿ ದಾಳಿ ನಡೆಸಿ ಗಂಭೀರವಾಗಿ ಗಾಯಗೊಳಿಸಿರುವ ಘಟನೆ ತಾಲೂಕಿನ ಧಾಮಣೆ (ಯಳ್ಳೂರು) ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ನಡೆದಿದೆ.

ಧಾಮಣೆಯ ಕಲ್ಮೇಶ್ವರನಗರ ನಿವಾಸಿ ಭಾಗೀರಥಿ ಚಾಂಗಪ್ಪ ಅಕನೋಜಿ (72) ಗಾಯಗೊಂಡವರು. ಸದ್ಯ ಅವರನ್ನು ಬೆಳಗಾವಿಯ ಸಿವಿಲ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ಮುಂದುವರಿದಿದೆ.

ಭಾನುವಾರ ಮಧ್ಯಾಹ್ನ ಸುಮಾರು 2 ಗಂಟೆಗೆ ಭಾಗೀರಥಿ ಅವರು ತಮ್ಮ ಮನೆಯ ಎದುರು ಕುಳಿತಿದ್ದರು. ಈ ವೇಳೆ ಅಲ್ಲಿಗೆ ಬಂದ ಬೀದಿ ನಾಯಿಯೊಂದು ಏಕಾಏಕಿ ಅವರ ಮೇಲೆ ದಾಳಿ ನಡೆಸಿದೆ. ನಾಯಿಯ ದಾಳಿಯಿಂದ ಅವರ ತಲೆಗೆ ಗಂಭೀರ ಗಾಯವಾಗಿದ್ದು, ಕೈಗೂ ತೀವ್ರ ಗಾಯಗಳಾಗಿವೆ.

ನಾಯಿಯನ್ನು ಓಡಿಸಲು ಭಾಗೀರಥಿ ಅವರು ಪ್ರಯತ್ನಿಸಿದರೂ, ಕೆಲಕಾಲ ದಾಳಿ ಮುಂದುವರಿಸಿದ ನಾಯಿ ಅವರನ್ನು ಗಾಯಗೊಳಿಸಿದೆ. ಬಳಿಕ ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಸ್ಥಳೀಯರು ಹಾಗೂ ಸಂಬಂಧಿಕರು ಸಿವಿಲ್ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ.

ಘಟನೆಯ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮಸ್ಥರು ಹಾಗೂ ಸಂಬಂಧಿಕರು ಆಸ್ಪತ್ರೆಗೆ ತೆರಳಿ ಭಾಗೀರಥಿ ಅವರ ಆರೋಗ್ಯ ವಿಚಾರಿಸಿದರು. ಹಾಡಹಗಲೇ ನಡೆದ ಈ ಘಟನೆ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಗ್ರಾಮಸ್ಥರಲ್ಲಿ ಆತಂಕ: ನಾಯಿಯು ಕಚ್ಚಿದೆ ಎಂಬ ಮಾಹಿತಿ ತಿಳಿದುಬಂದ ಬಳಿಕ ಗ್ರಾಮಸ್ಥರಲ್ಲಿ ಮತ್ತಷ್ಟು ಭೀತಿ ಉಂಟಾಗಿದೆ. ಇದೇ ನಾಯಿ ಗ್ರಾಮದಲ್ಲಿನ ಇತರರ ಮೇಲೂ ದಾಳಿ ನಡೆಸುವ ಸಾಧ್ಯತೆ ಇರುವುದರಿಂದ ಕೂಡಲೇ ಅದನ್ನು ನಿಯಂತ್ರಿಸುವಂತೆ ಜಿಲ್ಲಾಡಳಿತ, ಆರೋಗ್ಯ ಇಲಾಖೆ ಹಾಗೂ ಗ್ರಾಮ ಪಂಚಾಯಿತಿಗೆ ದೂರು ನೀಡಲು ಗ್ರಾಮಸ್ಥರು ಮುಂದಾಗಿದ್ದಾರೆ.

ನಗರ ಪ್ರದೇಶಗಳಲ್ಲಷ್ಟೇ ಅಲ್ಲದೆ ಗ್ರಾಮೀಣ ಭಾಗಗಳಲ್ಲಿಯೂ ಬೀದಿನಾಯಿಗಳ ಹಾವಳಿ ಹೆಚ್ಚುತ್ತಿರುವುದು ಸಾರ್ವಜನಿಕರ ಸುರಕ್ಷತೆಯ ಪ್ರಶ್ನೆಯನ್ನು ಮುನ್ನೆಲೆಗೆ ತಂದಿದೆ. ಬೀದಿನಾಯಿಗಳ ನಿಯಂತ್ರಣಕ್ಕೆ ಶೀಘ್ರ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಈ ಹಿಂದೆ ತಿಳಿಸಿದ್ದರು. ಇದೀಗ ಗ್ರಾಮೀಣ ಪ್ರದೇಶದಲ್ಲಿ ನಡೆದಿರುವ ಈ ಘಟನೆ ಹಿನ್ನೆಲೆಯಲ್ಲಿ ಬೀದಿನಾಯಿಗಳ ನಿಯಂತ್ರಣಕ್ಕೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ಕೇಳಿಬಂದಿದೆ.

---

equitas SMALL FINANCE BANK LTD

ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ (ಈ ಮುಂಚೆ ಈಕ್ವಿಟಾಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ನೋಂದಾಯಿತ ಕಛೇರಿ : ನಂ.769, ಸ್ಪೆನ್ಸರ್ ಪ್ಲಾಝಾ, 4ನೇ ಮಹಡಿ, ಹಂತ-II, ಅಣ್ಣಾ ಸಲೈ, ಚೆನ್ನೈ, ತಮಿಳುನಾಡು-600 002.
044-42995000, 044-42995050

ಸ್ಥಿರಾಸ್ತಿಯ ಮಾರಾಟಕ್ಕಾಗಿ ಹರಾಜು ಮಾರಾಟದ ಸೂಚನೆ

ಅನುಬಂಧ IV-A [ನಿಯಮ 8(6) ರ ನಿಬಂಧನೆಯನ್ನು ನೋಡಿ] - ಸ್ಥಿರಾಸ್ತಿಗಳ ಮಾರಾಟದ ಸೂಚನೆ

2002 ರ ಹಣಕಾಸು ಆಸ್ತಿಗಳ ಸೆಕ್ಯೂರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಸೆಕ್ಯೂರಿಟಿ ಬಡ್ಡಿ ಜಾರಿ ಕಾಯ್ದೆಯಡಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆಯನ್ನು ಭದ್ರತಾ ಬಡ್ಡಿ (ಜಾರಿ) ನಿಯಮಗಳು, 2002 ರ ನಿಯಮ 8 (6) ರ ನಿಬಂಧನೆಯೊಂದಿಗೆ ಓದಲಾಗಿದೆ. ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು, ಅಡಮಾನದಾರರು ಮತ್ತು ಖಾತರಿದಾರರು (ಗಳು) ಗೆ ಸೂಚನೆ ನೀಡಲಾಗಿದೆ, ಈಕ್ವಿಟಾಸ್ ಸಣ್ಣ ಹಣಕಾಸು ಬ್ಯಾಂಕಿನ ಅಧಿಕೃತ ಅಧಿಕಾರಿ, ಸೆಕ್ಯೂರ್ಡ್ ಕ್ರೆಡಿಟರ್ ಅವರು ಸ್ವಾಧೀನಪಡಿಸಿಕೊಂಡಿರುವ ಸೆಕ್ಯೂರ್ಡ್ ಕ್ರೆಡಿಟ್‌ಗೆ ಮಾಂಟೇಜ್ ಮಾಡಲಾದ/ವಿಧಿಸಲಾದ ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು "ಎಲ್ಲಿ ಇದೆಯೋ ಹಾಗೆಯೇ", "ಏನಿದೆಯೋ ಹಾಗೆಯೇ" ಮತ್ತು "ಕೆಳಗೆ ತಿಳಿಸಲಾದ ಖಾತೆಗಳಲ್ಲಿ ಬಾಕಿಗಳನ್ನು ವಸೂಲಿ ಮಾಡಲು ಆಧಾರವಿದೆಯೋ ಅಲ್ಲಿ ಮಾರಾಟ ಮಾಡಲಾಗುತ್ತದೆ. ಸಾಲಗಾರರ (ರು) ಅಡಮಾನದಾರರು/ ಜಾಮೀನುದಾರರು/ ಸೆಕ್ಯೂರ್ಡ್ ಆಸ್ತಿಗಳ ಬಾಕಿಗಳ ಮೀಸಲು ಬೆಲೆ/ಇ-ಹರಾಜು ದಿನಾಂಕ ಮತ್ತು ಸಮಯ ಮತ್ತು ಬಿಡ್ ಹೆಚ್ಚಳ ಮೊತ್ತದ ವಿವರಗಳನ್ನು ಕೆಳಗೆ ಉಲ್ಲೇಖಿಸಲಾಗಿದೆ.

ಕ್ರ. ಸಂ.	ಸಾಲಗಾರರು/ ಅಡಮಾನದಾರರು/ ಜಾಮೀನುದಾರರ ಹೆಸರು ಮತ್ತು ವಿಳಾಸ	ತಿಳಿದಿರುವ ಹೊರೆಗಳನ್ನು ಹೊಂದಿರುವ ಸ್ಥಿರಾಸ್ತಿಗಳ ವಿವರಣೆ, ಯಾವುದಾದರೂ ಇದ್ದರೆ	ಮೀಸಲು ಬೆಲೆ ಇಎಂಡಿ ಬೆಲೆ ಬಿಡ್ ಹೆಚ್ಚಳ ಬೆಲೆ	ಹರಾಜಿನ ದಿನಾಂಕ ಮತ್ತು ಸಮಯ	ಸಾಲ / ಒಟ್ಟು ಬಾಕಿಗಳು
1	ಶ್ರೀ/ಶ್ರೀಮತಿ ರಾಜು ಕಾಂಬಳೆ C/O ಶ್ರೀ/ಶ್ರೀಮತಿ ಗುರಲಿಂಗಪ್ಪ ಶ್ರೀ/ಶ್ರೀಮತಿ ಲಕ್ಷ್ಮೀಬಾಯಿ ಕಾಂಬಳೆ C/O ಶ್ರೀ/ಶ್ರೀಮತಿ ರಾಜು ಶ್ರೀ/ಶ್ರೀಮತಿ ಪ್ರವೀಣ್ ಕಾಂಬಳೆ C/O ಶ್ರೀ/ಶ್ರೀಮತಿ ರಾಜು ಶ್ರೀ/ಶ್ರೀಮತಿ ರಾಹುಲ್ ಕಾಂಬಳೆ C/O ಶ್ರೀ/ಶ್ರೀಮತಿ ರಾಜು (ಎಲ್ಲರ ವಾಸ: #19 ಗರಡದಿನ್ನಿ ಬಿಳಗಿ, ಬಿಳಗಿ, ಬಾಗಲಕೋಟ, ಕರ್ನಾಟಕ, 587116).	ನನ್ನ ಪರಿಶೀಲನೆಗಾಗಿ ಲಭ್ಯವಿರುವ ದಾಖಲೆಗಳಿಂದ ತಿಳಿದುಬರುವಂತೆ, ಆರ್‌ಡಿಪಿಆರ್‌ಡಿ ಸಂ.: 150100302700200131 ಅನ್ನು ಹೊಂದಿರುವ ಆಸ್ತಿಯು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ತಾಲೂಕು, ಕೋರ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗರಡದಿನ್ನಿ ಗ್ರಾಮದಲ್ಲಿರುವ, ಆಸ್ತಿ ಸಂಖ್ಯೆ-ಎ53 ಆಗಿದ್ದು, ಪೂರ್ವ-ಪಶ್ಚಿಮವಾಗಿ 12 ಮೀ.ಗಳು ಮತ್ತು ಉತ್ತರ-ದಕ್ಷಿಣವಾಗಿ 9 ಮೀ.ಗಳ ಅಳತೆಯನ್ನು ಹೊಂದಿದ್ದು, ಇದರ ಒಟ್ಟು ವಿಸ್ತೀರ್ಣವು 108 ಚದರ ಮೀಟರ್‌ಗಳು (1162.08 ಚದರ ಅಡಿಗಳು) ಆಗಿದೆ.	ರೂ. 7,44,000/- ರೂ. 74,400/- ರೂ. 10,000/-	27-10-2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ	ಸಾಲದ ಖಾತೆ ಸಂಖ್ಯೆ:- SEBLKOT0440158 ಪಾವತಿಸಬೇಕಾದ ಕ್ಲೇಮ್ ಮೊತ್ತ 18.12.2025 ರಂತೆ ರೂ.4,16,450/- ಜೊತೆಗೆ 19.12.2025 ರಿಂದ ಮುಂದಿನ ಬಡ್ಡಿ (ಮಾಸಿಕ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ), ಶುಲ್ಕಗಳು ಮತ್ತು ವೆಚ್ಚಗಳು ಇತ್ಯಾದಿ, (ಒಟ್ಟು ಬಾಕಿ ಮೊತ್ತ 14.09.2026 ರಂತೆ ರೂ.5,48,514/-).
	ಖರೀದಿ ಮತ್ತು ಮಾರಾಟದ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಪ್ರಶ್ನೆಗಳಿಗೆ ಸಂಪರ್ಕಿಸಿ: ಕಿರಣ್ ದ್ಯಾವಣ್ಣವರ್ 8095299287 , ಶಿವಶಂಕರ ಪಾಟೀಲ್ 9449785015				

ಖರೀದಿದಾರರು/ಬಿಡ್ಡರ್‌ಗಳು ಮುಂಗಡ ಹಣ ಠೇವಣಿ (ಇಎಂಡಿ) ಮೊತ್ತವನ್ನು ಎನ್‌ಇಎಫ್‌ಟಿ/ಆರ್‌ಟಿಜಿಎಸ್/ಡಿಡಿ ಮೂಲಕ "ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್" ಖಾತೆ ಸಂಖ್ಯೆ - 200000807725 ಮತ್ತು ಐಎಫ್‌ಎಸ್‌ಸಿ ಕೋಡ್- ESFB0001001, ಭಾಗ್ಯಮ್ ಗ್ಯಾಲೇರಿಯಾ ಹೊಸ ಸಂಖ್ಯೆ. 18, ಬರ್ಖುಲ್ಲಾ ರಸ್ತೆ, ಟಿ-ನಗರ, ಚೆನ್ನೈ-600 117, **ದಿನಾಂಕ: 26-10-2026** ರಂದು ಅಥವಾ ಅದಕ್ಕೂ ಮೊದಲು ಯಾವುದೇ ರಾಷ್ಟ್ರೀಕೃತ ಅಥವಾ ನಿಗದಿತ ಬ್ಯಾಂಕಿನಿಂದ ಡ್ರಾ ಮಾಡಲಾಗಿದೆ.

ಇ-ಹರಾಜು ಮಾರಾಟದ ನಿಯಮಗಳು ಮತ್ತು ಷರತ್ತುಗಳ ವಿವರಗಳಿಗಾಗಿ, ದಯವಿಟ್ಟು www.Equitasbank.in ಮತ್ತು https://www.bankeauctions.com ನಲ್ಲಿ ನೀಡಿರುವ ಲಿಂಕ್ ಅನ್ನು ನೋಡಿ.

ದಿನಾಂಕ: 23.09.2026, ಸ್ಥಳ: ಬಾಗಲಕೋಟೆ **ಸಹಿ/- ಅಧಿಕೃತ ಅಧಿಕಾರಿ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**

ಕೆನರಾ ಬ್ಯಾಂಕ್ Canara Bank
ಸಿಂಡಿಕೇಟ್‌ಬ್ಯಾಂಕ್ SyndicateBank
ಭಾರತ ಸರ್ಕಾರದ ಒಂದು ಉದ್ಯಮ

ಕೆನರಾ ಬ್ಯಾಂಕ್
ಎಆರ್‌ಎಂ ಶಾಖೆ-1
2ನೇ ಮಹಡಿ, ನಂ. 86, ಸ್ಪೆನ್ಸರ್ಸ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು-560001.

ಹರಾಜು ಮಾರಾಟ ಪ್ರಕಟಣೆ

ಪ್ರಾವಿಜನ್ ನಿಯಮ 8(6)ರ ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಪೋರ್ಸ್‌ಮೆಂಟ್ ನಿಯಮ 2002ರ ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆ್ಯಕ್ಟ್ 2002 ಮತ್ತು ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಪೋರ್ಸ್‌ಮೆಂಟ್ ನಿಯಮ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಯಪಡಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನದ / ವಿಧಿಸಿದ ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ-1 ರವರು (ಮುಂಚೆ ಅಗ್ರಿಕಲ್ಚರಲ್ ಫೈನಾನ್ಸ್ ಶಾಖೆ) ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ : 12.10.2026 ರಂದು (ಬೆ. 10.00 ರಿಂದ 11.00ಕ್ಕೆ)** ಸ್ವತ್ತನ್ನು ಎಲ್ಲಿದೆಯೋ ಹಾಗೆ, ಏನಿದೆಯೋ ಹಾಗೆ, ಹೇಗಿದೆಯೋ ಹಾಗೆ ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು. ಸಂದಾಯವಾಗತಕ್ಕ ಮೊಬಲಗು ರೂ. **83,37,70,701.95 ,** 21.09.2026 ರಂದು ಇದ್ದಂತೆ, ಮುಂದಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು ಚುಕ್ತಾ ಮಾಡುವುದಕ್ಕೆ ಋಣಭಾದ್ಯವಾಗಿರುತ್ತದೆ. ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ-1, ಬೆಂಗಳೂರು ಇವರಿಂದ **ಸಾಲಗಾರರಾದ : 1) ಸಾವಿತ್ರಿ ಜ್ಯೂವೆಲರ್ಸ್ ಪ್ರೈವೇಟ್ ಲಿಮಿಟೆಡ್,** ನಂ. 165, ಮೌಲಿ ಮಂತ್ರಾಲಯ, ಲಕ್ಷ್ಮಿ ದೇವಸ್ಥಾನದ ರಸ್ತೆ, ಹಿಂಡ್ವಾಡಿ, ಬೆಳಗಾಂ, ಕರ್ನಾಟಕ-590011. **2) ಶ್ರೀಮತಿ ದೀಪಾ ವರ್ನೇಕರ್** ಕೋಂ. ಶ್ರೀ ಪ್ರಶಾಂತ್ ವರ್ನೇಕರ್, ನಿರ್ದೇಶಕರು, ಸಾವಿತ್ರಿ ಜ್ಯೂವೆಲರ್ಸ್ ಪ್ರೈವೇಟ್ ಲಿಮಿಟೆಡ್, ನಂ. 165, ಮೌಲಿ ಮಂತ್ರಾಲಯ, ಲಕ್ಷ್ಮಿ ದೇವಸ್ಥಾನದ ರಸ್ತೆ, ಹಿಂಡ್ವಾಡಿ, ಬೆಳಗಾಂ, ಕರ್ನಾಟಕ-590011. **3) ಕುಮಾರಿ ಶಿಲ್ಪಾ ವರ್ನೇಕರ್** ಬಿನ್ ಶ್ರೀ ಸುರೇಶ್ ವರ್ನೇಕರ್, ನಿರ್ದೇಶಕರು, ಸಾವಿತ್ರಿ ಜ್ಯೂವೆಲರ್ಸ್ ಪ್ರೈವೇಟ್ ಲಿಮಿಟೆಡ್, ನಂ. 165, ಮೌಲಿ ಮಂತ್ರಾಲಯ, ಲಕ್ಷ್ಮಿ ದೇವಸ್ಥಾನದ ರಸ್ತೆ, ಹಿಂಡ್ವಾಡಿ, ಬೆಳಗಾಂ, ಕರ್ನಾಟಕ-590011. **4) ಶ್ರೀ ಕಿಶೋರ್ ವರ್ನೇಕರ್** ಬಿನ್ ಶ್ರೀ ಸುರೇಶ್ ವರ್ನೇಕರ್, ವಿಳಾಸ : ನಂ. 165, ಮೌಲಿ ಮಂತ್ರಾಲಯ, ಲಕ್ಷ್ಮಿ ದೇವಸ್ಥಾನದ ರಸ್ತೆ, ಹಿಂಡ್ವಾಡಿ, ಬೆಳಗಾಂ, ಕರ್ನಾಟಕ-590011. **5) ಶ್ರೀ ಸುರೇಶ್ ವರ್ನೇಕರ್** ಬಿನ್ ಶ್ರೀ ದತ್ತಾತ್ರೇಯ ವರ್ನೇಕರ್, ವಿಳಾಸ : ನಂ. 165, ಮೌಲಿ ಮಂತ್ರಾಲಯ, ಲಕ್ಷ್ಮಿ ದೇವಸ್ಥಾನದ ರಸ್ತೆ, ಹಿಂಡ್ವಾಡಿ, ಬೆಳಗಾಂ, ಕರ್ನಾಟಕ-590011.

ಅರ್ನೆಸ್ಟ್ ಹಣವನ್ನು **ಮೆ॥ ಪಿಎಸ್‌ಬಿ ಅಲಿಯಾನ್ಸ್ ಪ್ರೈವೇಟ್ ಲಿಮಿಟೆಡ್** (**https://baanknet.com/**) ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ ಆರ್‌ಟಿಜಿಎಸ್/ನೆಫ್ಟ್ ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 11.10.2026 ರ ಸಂಜೆ 5.00 ರೊಳಗೆ ಸಲ್ಲಿಸಬೇಕು.** **(ರೂ. ಲಕ್ಷಗಳಲ್ಲಿ)**

Lot	ಚರ ಮತ್ತು ಸ್ಥಿರಾಸ್ತಿಗಳ ವಿವರಣೆ	ಮೀಸಲು ಬೆಲೆ	ಇಎಂಡಿ	ಬಿಡ್ ಏರಿಕೆ ಮೊತ್ತ
1	ಆಸ್ತಿಯ ಆರ್ ಎಸ್ ನಂ. 59/1, ವಿಸ್ತೀರ್ಣ 1 ಎಕರೆ, ಇದು ಮಾದಾಪುರ, ಬೆಳಗಾಂನಲ್ಲಿದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಆರ್ ಎಸ್ ನಂ. 58, ಪಶ್ಚಿಮಕ್ಕೆ : ಆರ್ ಎಸ್ ನಂ. 76, ಉತ್ತರಕ್ಕೆ : ಆರ್ ಎಸ್ ನಂ. 57, ದಕ್ಷಿಣಕ್ಕೆ : ಆರ್ ಎಸ್ ನಂ. 77. **Coordinates of the property :** **Latitude- 15.8355970 Longitude- 74.5308150**	ರೂ. 154.00	ರೂ. 15.4	ರೂ. 1.00

ಎನ್ಕಂಬರೆನ್ಸ್ ವಿವರಗಳು: ಬ್ಯಾಂಕಿನ ಗಮನಕ್ಕೆ ಬಂದಂತೆ ಇರುವುದಿಲ್ಲ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಕೆನರಾ ಬ್ಯಾಂಕ್‌ನ ವೆಬ್‌ಸೈಟ್ (www.canarabank.com) ಅಥವಾ ಮೆ॥ ಪಿಎಸ್‌ಬಿ ಅಲಿಯಾನ್ಸ್ ಪ್ರೈವೇಟ್ ಲಿಮಿಟೆಡ್ (https://baanknet.com/) ಪೋರ್ಟಲ್‌ನ ಇ-ವ್ಯಾಲೆಟ್‌ನಲ್ಲಿ ಒದಗಿಸಲಾದ "ಇ-ಹರಾಜು" ಲಿಂಕ್ ಅನ್ನು ನೋಡಿ, ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ-1, ಬೆಂಗಳೂರು, ದೂ.ನಂ. 080-25310066, 8074639331 ಮತ್ತು 9486092152 ಅನ್ನು ಯಾವುದೇ ಕೆಲಸದ ದಿನದಂದು ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ: 22.09.2026
ಸ್ಥಳ: ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿಗಳು
ಕೆನರಾ ಬ್ಯಾಂಕ್

ಪ್ರತಿದಿನ
ಉದಯಕಾಲ
ಪತ್ರಿಕೆ ಓದಿರಿ

ಕ್ರಿ. ಮಿ. ನಂ: 647/2026

ಮೆ|| ದಿವಾಣಿ ಜೆ.ಎಮ್.ಎಫ್.ಸಿ.
ಇವರ ನ್ಯಾಯಾಲಯ ಮೂಡಲಗಿ
ಸ್ಥಳ: ಮೂಡಲಗಿ

1) ಶ್ರೀಮತಿ ಉದ್ದವ್ವ ಕೋಂ ಸುಭಾಸ ಅರಭಾಂವಿ ಸಾ|| ಹೊಸಟ್ಟಿ, ತಾ: ಮೂಡಲಗಿ ಜಿ:ಬೆಳಗಾವಿ
...... ಅರ್ಜಿದಾರರು.

||ವಿರುದ್ಧ||

1) ಮೆ|| ತಹಶೀಲ್ದಾರ ಸಾಹೇಬರು ಮೂಡಲಗಿ ಜನನ ಮತ್ತು ಮರಣ ನೋಂದಣಿ ಅಧಿಕಾರಿಗಳು ತಾ: ಮೂಡಲಗಿ ಜಿ:ಬೆಳಗಾವಿ
..... ಎದುರುಗಾರ.

ಸಾರ್ವಜನಿಕ ಜಾಹೀರಾತು ನೋಟಿಸು

ಇದರಲ್ಲಿ ಮೆ|| ನ್ಯಾಯಾಲಯದ ಆದೇಶದ ಮೇರೆಗೆ ಕೊಡುವ ಜಾಹಿರಾತು ನೋಟಿಸು ಈ ಕೆಳಗಿನಂತೆ ಇರುತ್ತದೆ.

ಈ ಮೇಲೆ ವಿವರಿಸಿದ ಅರ್ಜಿದಾರಳ ತಾಯಿಯಾದ ದಿವಂಗತ ಶ್ರೀಮತಿ ಸಿದ್ದವ್ವಾ ಕೋಂ ಸಿದ್ದಪ್ಪ ಕಂಬಳಿ ಇವರು ದಿನಾಂಕ: 09/04/2000 ರಂದು ಮೂಡಲಗಿ ತಾಲೂಕಾ ಪೈಕಿ ಹೊಸಟ್ಟಿ ಗ್ರಾಮದಲ್ಲಿ ಮೃತವಾಗಿರುತ್ತಾಳೆ. ಸದರಿ ಅರ್ಜಿದಾರಳ ತನ್ನ ತಾಯಿಯ ಮರಣ ಪ್ರಮಾಣ ಪತ್ರ ಕೇಳಿ ಜನನ ಮತ್ತು ಮರಣ ನೋಂದಣಿ ಕಾಯ್ದೆ ಕಲಂ 13(3) ಅಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಸದರಿ ಪ್ರಕರಣದ ಮುದ್ದತ್ತ ದಿನಾಂಕ: 26/10/2026 ರಂದು 11.00 ಗಂಟೆಗೆ ಮೆ|| ನ್ಯಾಯಾಲಯದವರು ನಿಗದಿ ಪಡಿಸಿದ್ದು ಇರುತ್ತದೆ. ಸದರಿ ಅರ್ಜಿಗೆ ಯಾರಾದರು ತಕರಾರು ವಗೈರೆ ಸಲ್ಲಿಸುವವರು ಇದ್ದರೆ ಸದರಿ ದಿನಾಂಕದಂದು ಖುದ್ದಾಗಿ ಅಥವಾ ತಮ್ಮ ವಕೀಲರ ಮುಖಾಂತರ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಸಲ್ಲಿಸತಕ್ಕದ್ದು. ಒಂದು ವೇಳೆ ಮೆ|| ನ್ಯಾಯಾಲಯದವರು ಕಾನೂನು ಮೇರೆಗೆ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಜಾಹಿರಾತು ನೋಟಿಸು.

ಈ ನೋಟಿಸನ್ನು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರದೊಂದಿಗೆ ದಿನಾಂಕ: 18/09/2026 ರಂದು ಕೊಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರ
(ಕೆ.ವ್ಹಿ.ಸತ್ತಿಗೇರಿ)
ಮೆ|| ದಿವಾಣಿ ಜೆ.ಎಮ್.ಎಫ್.ಸಿ.
ನ್ಯಾಯಾಲಯ ಮೂಡಲಗಿ.

ಹಾಜರ ಪಡಿಸುವವರು
(ಆರ್.ಬಿ.ಕುಳ್ಳೂರ)
ಅರ್ಜಿದಾರರ ಪರ ವಕೀಲರು
ಮೂಡಲಗಿ

ಬೆಂಚ ಕ್ಲಾರ್ಕ
(ಆಯ್.ಎ.ಅರ್ಕಾಟೆ)
ಮೆ|| ದಿವಾಣಿ ಜೆ.ಎಮ್.ಎಫ್.ಸಿ.
ನ್ಯಾಯಾಲಯ ಮೂಡಲಗಿ.

ಸ್ಥಳ: ಮೂಡಲಗಿ
ದಿನಾಂಕ: 17/09/2026

Udayakala is published by K.N.Puttalingaiah from no 1576, Rame Gowda Building, 2nd floor, V.V.Road, Mandya-571 401 on behalf of Anikethana Publication and Printers edited by K.N.Puttalingaiah and Printed by M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd Sy no. 650/3, Uchagaon- Belgundi ByPass Road, Uchagaon, Belgaum -501128, Manipal Media Network Limited Udayavani Building, Udayavani Road Manipal – 576 104, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi,ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030, ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, Shimoga- 577 201. All rights reserved. Reproduction in whole or in part without written permission is prohibited. RNI REG NO. 71090/97.Volume:30 Issue: 99